ಯಾವುದೇ ಹೋಟೆಲ್ ಆದರೂ ಸರಿ. ಇವಳೇ ಬಯಸಿ ಬಯಸಿ ಅವನೊಡನೆ ಕಾಲಕಳೆಯುತ್ತಿದ್ದಳು. ತಾನೇ ಇಷ್ಟಪಟ್ಟು ಅವನೊಡನೆ ಇದ್ದು ಇಂದು ಅವನ ವಿರುದ್ಧ ಸಹಿಹಾಕುವುದೇ? ಆಗದ ಕೆಲಸ.

ಆದರೆ, ಇಂದಲ್ಲ ನಾಳೆ ಅವನ ಗುಟ್ಟು ಬಯಲಾಗುವುದು ಖಂಡಿತ. ಅವನು ಇಲ್ಲಿ ಬಹುಕಾಲ ಇರಲಾರ. ಅವನನ್ನು ಈ ವಿಶ್ವವಿದ್ಯಾಲಯ ಹೊರಹಾಕಿದರೆ ನನ್ನ ಗತಿ ಏನು? ಈ ಯೂನಿಯನ್ ನನ್ನ ಕಡೆ ನೋಡುವುದೂ ಇಲ್ಲ.

ನಯನಾ ತನ್ನ ಎಂದಿನ ಧೈರ್ಯವನ್ನು ತಂದುಕೊಂಡಳು. ಅಲ್ಲದೆ ಇಷ್ಟು ಆಪ್ತನಾಗಿದ್ದ ಟರ್ನರ್ ಹೇಗೋ ನನ್ನನ್ನು ನೋಡಿಕೊಳ್ಳುತ್ತಾನೆ. ಅವನಿಗೆ ಆಸ್ಟ್ರೇಲಿಯಾದ ಮತ್ತು ಪ್ರಪಂಚದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಒಳ್ಳೆಯ ಹೆಸರಿದೆ. ಎಲ್ಲಿಯಾದರೂ ನನಗೂ ಒಂದು ಕೆಲಸ ಕೊಡಿಸುತ್ತಾನೆ ಎಂದು ನಿರ್ಧರಿಸಿದ ನಯನಾ ಮೂರು ದಿನ ಪ್ರಯೋಗಾಲಯದತ್ತ ಸುಳಿಯಲಿಲ್ಲ. ಸ್ಟೆಲ್ಲಾ ಕಳುಹಿಸಿದ ಈಮೇಲ್‌ಗಳಿಗೆ ಉತ್ತರಿಸಲಿಲ್ಲ. ಮುಂದಿನ ಸೋಮವಾರ ಕೆಲಸಕ್ಕೆ ಬಂದಾಗ ದೂರು ವೈಸ್ ಚಾನ್ಸೆಲರ್ ಅವರಿಗೆ ಹೋಗಿದ್ದು ಗೊತ್ತಾಯಿತು.

